
ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೧ | ಮೇ ೨೦೦೫ | ಬೆಂಗಳೂರು | ಸಂಚಿಕೆ ೪

## ಮತ - ಧರ್ಮ



ನಾನು ಮದ್ರಾಸಿನ ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ ಪ್ರತಿ ವಾರಾಂತ್ಯ ಅಡಿಯಾರ್‌ಗೆ ಹೋಗುತ್ತಿದ್ದೆ. ಅಡಿಯಾರ್ ಥಿಯಾಸಾಫಿಕಲ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ನನಗೆ ಅದು ಮುಖ್ಯ ಆಕರ್ಷಣೆ. ವಿವಿಧ ಕ್ಷೇತ್ರಗಳ ದೊಡ್ಡ ವ್ಯಕ್ತಿಗಳು ಅಲ್ಲಿಗೆ ಬರುತ್ತಿದ್ದರು. ಅನಿಬೆಸೆಂಟರ ವ್ಯಕ್ತಿತ್ವ ಮತ್ತು ಕಾರ್ಯಗಳಿಂದ ಜನ ಆಕರ್ಷಿತರಾಗಿದ್ದರು.

ಜಿಡ್ಡು ಕೃಷ್ಣಮೂರ್ತಿಯವರು ಪ್ರವಾದಿಯಾಗುತ್ತಾರೆಂದು ಮೊದಲು ಗುರುತಿಸಿದವರು ಲೆಡ್ ಬೀಟರ್. ಅವರು ಅನಿಬೆಸೆಂಟರ ಜೊತೆಗಾರರು. ಲೆಡ್ ಬೀಟರ್, ಅರುಂಡೇಲ್, ಸಿ. ಜಿನರಾಜದಾಸ (ಇವರು ಜೈನರೂ, ದೊಡ್ಡ ವಿದ್ವಾಂಸರೂ ಆಗಿದ್ದರು) ಅನಿಬೆಸೆಂಟರ ಜೊತೆಯಲ್ಲಿದ್ದರು. ಸರ್ ಸುಬ್ರಹ್ಮಣ್ಯ ಅಯ್ಯರ್, ಮದ್ರಾಸು ಹೈಕೋರ್ಟಿನಿಂದ ನಿವೃತ್ತರಾದವರು, ಥಿಯಾಸಫಿಸ್ಟ್ ಆಗಿದ್ದರು. ಉನ್ನತ ವ್ಯಕ್ತಿತ್ವ. ಭಾರತಕ್ಕೆ ಸ್ವಾತಂತ್ರ್ಯ ಕೊಡಲಿಲ್ಲವೆಂದು ನೈಟ್‌ಹುಡ್ ಅನ್ನು ಹಿಂದಿರುಗಿಸಿದರು. ಅವರೊಮ್ಮೆ ಬೆಂಗಳೂರಿಗೆ ಬಂದಿದ್ದಾಗ ಬಹುಶಃ ಶಿರಹಟ್ಟಿ ಕಂಪನಿಯವರದೋ ಏನೋ ಕೃಷ್ಣಲೀಲ ನಾಟಕ ನೋಡಿದರು. ಶ್ರೀ ಕೃಷ್ಣನ ಬಗ್ಗೆ ಅದ್ಭುತವಾಗಿ ಮಾತನಾಡಿದರು.

ಜಿಡ್ಡು ಅವರ ತಂದೆತಾಯಿಗಳು ಅಡಿಯಾರಿನಲ್ಲೇ ಇದ್ದರು. ಇವರಲ್ಲಿ ಯಾವುದೋ ವಿಶಿಷ್ಟ ಸತ್ವವಿದೆಯೆಂದರಿತು ಅನಿಬೆಸೆಂಟ್ ಅವರಿಗೆ ತಿಳಿಸಿದಾಗ, ಆಕೆಗೂ ಅದರ ಅರಿವಾಯಿತು. ಅನಿಬೆಸೆಂಟ್ ಹಿಂದೆ ರ್‍ಯಾಷನಲಿಸ್ಟ್ ಆಗಿದ್ದವರು. ಎಂ.ಪಿ.ಯಾಗಿದ್ದು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಲು ನಿರಾಕರಿಸಿದ್ದ ಬ್ರಾಡ್‌ಲಾನ ಪ್ರಭಾವಕ್ಕೆ ಒಳಗಾಗಿದ್ದವರು. ಹೀಗೆ ವಿಚಾರವಾದಿಯಾಗಿದ್ದ ಅನಿಬೆಸೆಂಟರು ಮಾರ್ಲೆಯ ಪೆಲ್‌ಮೆಲ್ ಗೆಜೆಟ್‌ಗೆ ಮಡಾಮ್ ಬ್ಲಾವಟ್ಸ್ಕಿ ಅವರ 'ಸೀಕ್ರೆಟ್ ಡಾಕ್ಟ್ರಿನ್' ವಿಮರ್ಶೆ ಮಾಡುವಾಗ, ಅದರಿಂದ ಪ್ರಭಾವಿತರಾಗಿ ಆಧ್ಯಾತ್ಮದ ತವರಾದ ಭಾರತದಿಂದ ಆಕರ್ಷಿತರಾಗಿ ಇಲ್ಲಿ ಬಂದು ಥಿಯಾಸಾಫಿಕಲ್ ಸೊಸೈಟಿ, ದೇಶೀಯ ಶಾಲೆ, ಸ್ವಾತಂತ್ರ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾಗಿದ್ದರು. ಬನಾರಸ್‌ನಲ್ಲಿ ಸೆಂಟ್ರಲ್ ಹಿಂದೂ ಕಾಲೇಜು ಮೊದಲು ಪ್ರಾರಂಭಿಸಿದರು. ಅವರು ಮೊದಲು ಬಾಬು ಭಗವಾನದಾಸರ ಸಂಪರ್ಕಕ್ಕೆ ಬಂದರು (ಮದ್ರಾಸು, ಮುಂಬಯಿಗಳ ಗವರ್ನರಾಗಿದ್ದ ಶ್ರೀ ಪ್ರಕಾಶರ ತಂದೆ). ಅನಿಬೆಸೆಂಟ್ ಮತ್ತು ಭಗವಾನ ದಾಸರು ಸೇರಿ ಗೀತೆಯನ್ನು ಭಾಷಾಂತರಿಸಿದರು. ಆ ಕಾರಣಗಳಿಂದ ಜಿಡ್ಡುವಿನ ಅಂತಃಸತ್ವದ ಬಗ್ಗೆ ವಿಶಿಷ್ಟ ವಿಶ್ವಾಸ. ಮಗನಂತೆ ಅವರನ್ನು ಸ್ವೀಕರಿಸಿ ಕೃಷ್ಣಮೂರ್ತಿ ಮತ್ತು ಅವರ ಸಹೋದರ ನಿತ್ಯಾನಂದ ಅವರನ್ನು ಇಂಗ್ಲೆಂಡಿಗೆ ಕಳುಹಿಸಿದರು. ಇದರ ಉದ್ದೇಶ ವಿಶ್ವದ ಗುರುವಾಗುವ ವ್ಯಕ್ತಿಯೆಂದು ಅವರು ಗುರುತಿಸಿದ ಜಿಡ್ಡು ಅವರ ವ್ಯಕ್ತಿ ವಿಕಾಸಕ್ಕಾಗಿ. ಇಂಗ್ಲೆಂಡಿನಿಂದ ಜಿಡ್ಡು ಬಂದಾಗಲೆಲ್ಲ ಒಂದು ಸಂಭ್ರಮ. ನನಗೆ ಜಿಡ್ಡು ಅವರು ಹುಡುಗನಾಗಿದ್ದಾಗಿನ ನೆನಪು ಬರುತ್ತಿಲ್ಲ .

ಜಿಡ್ಡು ಅವರನ್ನು ಥಿಯಾಸಫಿಕಲ್ ಸೊಸೈಟಿಯಲ್ಲಿ ಪ್ರಾರಂಭಿಸಿದ 'ಸ್ಟಾರ್ ಆಫ್ ದಿ ಈಸ್ಟ್' ಎಂಬ ವಿಶೇಷ ಆಧ್ಯಾತ್ಮಿಕ ಬಳಗದ ಮುಖ್ಯಸ್ಥರೆಂದು ಘೋಷಿಸಲಾಯಿತು. ಅವರೊಂದು ತರಹದ ಆಧ್ಯಾತ್ಮಿಕ ಸಾಮ್ರಾಜ್ಯದ ಅಧಿಪತಿಗಳಾದರು. ಹಲವು ವರ್ಷಗಳ ನಂತರ ಸ್ವತಂತ್ರ ಚಿಂತಕರಾದ ಮತ್ತು ಪ್ರಾಮಾಣಿಕರಾದ ಜಿಡ್ಡು ಅವರಿಗೆ ಈ ಪಾತ್ರ ವಹಿಸುವುದು ಅಸಹನೀಯವಾಯಿತು. ಅವರು ತಾವು ಇದರಲ್ಲಿ ನಂಬಿಕೆ ಇಟ್ಟಿಲ್ಲವೆಂದೂ ತಾವು ಪ್ರವಾದಿಯಲ್ಲವೆಂದೂ ಸಾರಿ ಥಿಯಾಸಾಫಿಕಲ್ ಸೊಸೈಟಿಯಿಂದ ಹೊರಬಂದರು. ತಮಗಾಗಿ ವ್ಯವಸ್ಥೆ ಮಾಡಿದ್ದ ಸಮಸ್ತ ಸ್ಥಾನ, ವೈಭವ ಮತ್ತು ಸವಲತ್ತುಗಳನ್ನು ಸ್ವ-ಇಚ್ಛೆಯಿಂದ ತ್ಯಜಿಸಿದರು. ಇದರ ಪರಿಣಾಮವಾಗಿ ಅವರು ತಮ್ಮ ಆಪ್ತರಾಗಿದ್ದವರಿಂದ ತೊರೆಯಲ್ಪಟ್ಟರು. ಅವರ ಪರಿಸ್ಥಿತಿ ಬೀದಿಯ ಪಾಲಾಗುವಂತಾಯಿತು. ಆದರೆ ಜಿಡ್ಡು ಅವರು ಇದಾವುದಕ್ಕೂ ಅಂಜಲಿಲ್ಲ, ತಮ್ಮ ನಿರ್ಧಾರವನ್ನು ಬದಲಾಯಿಸಲಿಲ್ಲ .

ಇತ್ತ ಜಿಡ್ಡು ಅವರ ಈ ನಿರ್ಧಾರದಿಂದ ಅನಿಬೆಸೆಂಟರ ಪ್ರಪಂಚವೇ ಕುಸಿಯಿತು. ಆದರೆ ಅವರು ಜಿಡ್ಡು ಅವರಿಗೆ ಅವರ ಮನಸ್ಸಾಕ್ಷಿಯಂತೆ ನಡೆಯಲು ಹೇಳಿದರು. ಎಲ್ಲಾ ಆಸರೆಯನ್ನು ಕಳೆದುಕೊಂಡಿದ್ದ ಜಿಡ್ಡು ಅವರಿಗೆ ಮದರಾಸಿನಲ್ಲಿ 'ವಸಂತ್

**(5ನೇ ಪುಟದಲ್ಲಿ ಮುಂದುವರೆದಿದೆ)**



# ಬೆಂಗಳೂರು ಶಿಕ್ಷಣ ಕೇಂದ್ರದಲ್ಲಿ ಕನ್ನಡ ಸಮಾವೇಶ 2005

ಕೃಷ್ಣಮೂರ್ತಿ ಫೌಂಡೇಶನ್ನಿನ ಬೆಂಗಳೂರು ಅಧ್ಯಯನ ಕೇಂದ್ರ ಏಪ್ರಿಲ್ 15, 16, 17ರಂದು ಮೂರು ದಿನಗಳ ಕನ್ನಡ ಸಮಾವೇಶವನ್ನು ವ್ಯಾಲಿ ಶಾಲೆಯ ಆವರಣದಲ್ಲಿ ಆಯೋಜಿಸಿತ್ತು. ಸಮಾವೇಶದ ಚರ್ಚೆಯ ವಿಷಯ 'ಬದುಕಿನ ಸಮಸ್ಯೆಗಳು ಮತ್ತು ಬದಲಾವಣೆಯ ತುರ್ತು'. ಸಮಾವೇಶದಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ, ಧಾರವಾಡ, ಬೆಳಗಾಂವ, ದಾವಣಗೆರೆ, ಚಡಚಣ, ಅಜ್ಜಂಪುರ, ಬೆಂಗಳೂರು ಮುಂತಾದ ಸ್ಥಳಗಳಿಂದ ಹಾಗೂ ಚನ್ನೈ ಮುಂತಾದ ದೇಶದ ಇತರ ಭಾಗಗಳಿಂದ ಸುಮಾರು 50 ಸದಸ್ಯರು ಪಾಲ್ಗೊಂಡಿದ್ದರು.

ದಿನಾಂಕ 15ರಂದು ಮುಂಜಾನೆ 10 ಗಂಟೆಗೆ ವ್ಯಾಲಿ ಶಾಲೆಯ ಶಿಕ್ಷಕ ವೃಂದದವರಿಂದ ಪ್ರಾರ್ಥನೆ  ಹಾಗೂ ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮೊದಲು ಕೃಷ್ಣಮೂರ್ತಿಯವರ ಭಾಷಣದ ವಿಡಿಯೋ ಪ್ರದರ್ಶನ ಜರುಗಿತು. ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ॥ ಸತೀಶ್ ಇನಾಂದಾರ್ ಸಮಾವೇಶಕ್ಕೆ ಆಗಮಿಸಿದ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ, ಬೆಂಗಳೂರು ಕೇಂದ್ರದ ಉದ್ದೇಶವನ್ನು ವಿವರಿಸಿದರು. ಕನ್ನಡದಲ್ಲಿ ಕೃಷ್ಣಮೂರ್ತಿಯವರ ಗ್ರಂಥಗಳನ್ನು ಪ್ರಕಟಿಸುವುದರೊಂದಿಗೆ, ಕರ್ನಾಟಕದ ವಿವಿಧ ನಗರಗಳಲ್ಲಿ ಸಮಾವೇಶ ಜರುಗಿಸುವ ನಿಟ್ಟಿನಲ್ಲಿ ಧಾರವಾಡ, ಬೆಳಗಾಂವ, ಮೈಸೂರು, ದಾವಣಗೆರೆ, ಉಡುಪಿಗಳಲ್ಲಿ ಸಮಾವೇಶಗಳನ್ನು ಯಶಸ್ವಿಯಾಗಿ ಆಯೋಜಿಸಲಾಯಿತು ಎಂದು ಹೇಳಿದರು. ಪ್ರಸ್ತುತ ಸಮಾವೇಶದ ವಿಷಯ 'ಬದುಕಿನ ಸಮಸ್ಯೆಗಳು ಮತ್ತು ಬದಲಾವಣೆಯ ತುರ್ತು' ಆಧುನಿಕ ಜಗತ್ತಿನ ಅನಿವಾರ್ಯತೆ ಎಂದು ತಿಳಿಸಿ, ಔದ್ಯಮಿಕ ಕ್ರಾಂತಿ ಶೋಷಕರ ಹಾಗೂ ಶೋಷಿತರ ಅಂತರ ಹೆಚ್ಚಿಸಿದೆ ಎಂದು ವಿವರಿಸಿ, ಮಾನಸಿಕ ಬದಲಾವಣೆಯ ಅಗತ್ಯತೆ ಸಮಾವೇಶದ ಚರ್ಚೆಯ ಸವಾಲು ಎಂದು ತಿಳಿಸಿದರು.

ಸಹ್ಯಾದ್ರಿ ಶಾಲೆಯ ನಿರ್ದೇಶಕರಾದ ಶ್ರೀ ಕಿಶೋರ ಖೈರನಾರ ಪ್ರಥಮ ಉಪನ್ಯಾಸ – 'ದೈನಂದಿನ ಜೀವನದಲ್ಲಿ ಬದಲಾವಣೆಯ ತುರ್ತು' ಕುರಿತು ಮಾತನಾಡಿದರು. ಮಾನವನ ಜೀವನದ ಬಹಿರಂಗದ ಸಮಸ್ಯೆಗಳು ಹಾಗೂ ಅಂತರಂಗದ ಸಮಸ್ಯೆಗಳನ್ನು ವಿವರಿಸಿ, ಮಾನವ ಗಂಡಾಂತರ ಎದುರಿಸುತ್ತಿದ್ದಾನೆ ಎಂದು ತಿಳಿಸಿದರು. ಮಾನವ ಯಾಂತ್ರಿಕತೆಯನ್ನು ಬೆಳೆಸಿಕೊಂಡು ಜೀವನ ಯಾಂತ್ರೀಕವಾಗಿಸಿಕೊಂಡು ಮಾನಸಿಕವಾಗಿ, ಸಂವೇದನಾಶೀಲತೆಯನ್ನು ಕಳೆದುಕೊಂಡಿದ್ದಾನೆ. ಜೀವನವನ್ನು ಮರುಪರಿಶೀಲನೆ ಮಾಡುವ ಅಗತ್ಯವನ್ನು ವಿವರಿಸಿದರು.

ಡಾ॥ ಎಚ್.ಎಸ್. ರಾಘವೇಂದ್ರರಾವ್ ತಮ್ಮ ಉಪನ್ಯಾಸದಲ್ಲಿ ಜೆ. ಕೃಷ್ಣಮೂರ್ತಿಯವರ ವಿಚಾರಗಳು ಬಿಂದುವಿನಲ್ಲಿ ಸಿಂಧು ಕಂಡಂತೆ ಎಂದು ತಿಳಿಸಿ ಜೀವನದಲ್ಲಿ ಬದಲಾವಣೆ ತುರ್ತು ಕುರಿತು ವಿಶ್ಲೇಷಿಸಿದರು. ಸಮಾಜ ಬದಲಾವಣೆ ಜೊತೆ ವ್ಯಕ್ತಿಯ ಬದಲಾವಣೆ ಅಗತ್ಯ. ಅಪೇಕ್ಷೆ ಇರದೆ, ನಿರೀಕ್ಷಣೆ ಇದ್ದರೆ ಬದಲಾವಣೆ ತಾನೇ ನಿರ್ಮಾಣವಾಗುವುದು.

ನಮ್ಮೊಳಗಿನ ಬದಲಾವಣೆ – ಜಗತ್ತಿನ ಬದಲಾವಣೆ ಆಗಬೇಕು. ಜೀವನದಲ್ಲಿ ಪ್ರೀತಿ, ಕಾಳಜಿ ಮುಖ್ಯ. ದೈನಂದಿನ ಜೀವನದಲ್ಲಿ ತಾಳ್ಮೆ, ಘಟನೆಗಳ ಸಾಂಗತ್ಯ, ಪ್ರತಿಮೆಗಳ ಧ್ವಂಸ ಮಾಡುವುದರ ಮೂಲಕ, ಪ್ರೀತಿಸುವುದರ ಮೂಲಕ ಬದಲಾವಣೆ ತರಲು ಸಾಧ್ಯ ಎಂದು ತಿಳಿಸಿದರು. ಮಧ್ಯಾಹ್ನ ಚಿಕ್ಕ ಗುಂಪುಗಳಲ್ಲಿ ಚರ್ಚೆ ನಡೆಸಲಾಯಿತು.

ದಿನಾಂಕ 16ರಂದು ಮುಂಜಾನೆ ಪ್ರೊ. ಕೃಷ್ಣನಾಥ ಅವರು 'ಸಮಾಜವಾದದಿಂದ ಆಧ್ಯಾತ್ಮದ ಕಡೆಗೆ ಪಯಣ' ಕುರಿತು ಉಪನ್ಯಾಸ ನೀಡಿದರು. ಪ್ರತಿಯೊಬ್ಬ ವ್ಯಕ್ತಿ ದುಃಖದಲ್ಲಿ ಮುಳುಗಿದ್ದಾನೆ. ಬೇರೆಯವರ ದುಃಖ ಕೇಳುವ ತಾಳ್ಮೆ ಇಲ್ಲ. ಜೆ.ಕೆ. ಅವರ ಅನುಯಾಯಿ ಶ್ರೀ ಅಚ್ಯುತ ಪಟವರ್ಧನರನ್ನು ನೆನಪಿಸಿದ ಅವರು, ತಾವು ಸೆಂಟ್ರಲ್ ಹಿಂದೂ ಸ್ಕೂಲಿನಲ್ಲಿ ತಮಗೆ ಜೆ.ಕೆ. ಪರಿಚಯವಾದ ಸಂಗತಿ ತಿಳಿಸಿದರು. ಜೆ.ಕೆ. ಒಡನಾಟದಲ್ಲಿ ದಶಕಗಳು ಕಳೆದರೂ ಬಹಿರಂಗದ ಯಾತ್ರೆ, ಅಂತರಂಗದ ಯಾತ್ರೆ ಬಾಯಾರಿಕೆ ಆರಿಲ್ಲ ಎಂದು ತಿಳಿಸಿದರು. ಆರ್ಥಿಕ–ರಾಜಕೀಯ ಪರಿವರ್ತನೆಯಿಂದ ಸಾಮಾಜಿಕ ಬದಲಾವಣೆ ಕಷ್ಟಸಾಧ್ಯ. ಅದೇ ರೀತಿ ಅಂತರಂಗದ ಬದಲಾವಣೆಯಿಂದ ಸಾಮಾಜಿಕ ಬದಲಾವಣೆ ಸಹ ಅಸಾಧ್ಯ. ಗೋಪಿ ಭಾವ, ಏಕೈಕ ಗುರು ಕಲ್ಪನೆ, ಭಾರತದ ಭವ್ಯ ಕಲ್ಪನೆ ಕಳೆದುಕೊಂಡ ಹಾಗೆ ಎಂದು ಭಾವಿಸುವುದಾಗಿ ತಿಳಿಸಿದರು.

ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, ಸಮಾಜದಲ್ಲಿ ಬದಲಾವಣೆಯ ತುರ್ತು ಕುರಿತು ಉಪನ್ಯಾಸ ನೀಡಿದರು. ಟಿ.ಎಸ್. ಎಲಿಯಟ್‌ರ 'ವೇರ್ ಇಸ್ ಲೈಫ್? ವಿ ಹ್ಯಾವ್ ಲಾಸ್ಟ್ ಇನ್ ಲಿವಿಂಗ್' ನುಡಿಯನ್ನು ವಿವರಿಸುತ್ತಾ, ಆಧುನಿಕ ಮಾನವನಿಗೆ ಬದಲಾವಣೆ ಗ್ರಹಿಸಲು ಶಕ್ಯವಿಲ್ಲ, ಬದಲಾವಣೆ ನಿಜಕ್ಕೂ ಅಗತ್ಯವಿದೆಯೇ? ಎಂದು ಅಭಿಪ್ರಾಯಪಟ್ಟರು.

ನಂತರ ಕೃಷ್ಣಮೂರ್ತಿಯವರ ವಿಡಿಯೋ ಭಾಷಣ ಪ್ರದರ್ಶಿಸಲಾಯಿತು. ಮಧ್ಯಾಹ್ನ 'ಸಂಬಂಧದಲ್ಲಿ ಬದಲಾವಣೆ ತುರ್ತು'  ಕುರಿತು ಪ್ರಸ್ತಾವಿಕವಾಗಿ ಶ್ರೀ ಕೆ.ಜಿ.ಕುಲಕರ್ಣಿ ಮಾತನಾಡಿದರು. ಅವರು ಪ್ರಸ್ತುತ ಪರಿಸ್ಥಿತಿಯನ್ನು ವಿವರಿಸಿದರು. ನಂತರ ಚಿಕ್ಕ ಗುಂಪುಗಳಲ್ಲಿ ಸಮೂಹ ಚರ್ಚೆ ನಡೆಸಲಾಯಿತು. ಕನ್ನಡ ಭಾಷೆಯ ಸಮೂಹ ಚರ್ಚೆಯ ನೇತೃತ್ವವನ್ನು ಮೂರು ಗುಂಪುಗಳಲ್ಲಿ ಶ್ರೀ ಎಸ್. ಗೋಪಾಲನ್, ಪ್ರೊ॥ ನಾಗಭೂಷಣಸ್ವಾಮಿ, ಶ್ರೀ ಕೆ.ಜಿ. ಕುಲಕರ್ಣಿ, ಶ್ರೀ ಬಸವಲಿಂಗಪ್ಪ, ಡಾ॥ ಸತೀಶ್ ಇನಾಮದಾರ, ಡಾ॥ ಎಚ್.ಎಸ್. ರಾಘವೇಂದ್ರರಾವ್ ವಹಿಸಿದರು. ಇಂಗ್ಲಿಷ್ ಭಾಷೆಯ ಸಮೂಹ ಚರ್ಚೆ ನೇತೃತ್ವ ಶ್ರೀ ಕಿಶೋರ ಖೈರನಾರ ವಹಿಸಿದರು.

ದಿನಾಂಕ 17ರಂದು ಮುಂಜಾನೆ 'ಶಿಕ್ಷಣದಲ್ಲಿ ಬದಲಾವಣೆಯ ತುರ್ತು' ಕುರಿತು ತಜ್ಞರ ಸಂವಾದ ಕಾರ್ಯಕ್ರಮ ಜರುಗಿತು. ಶ್ರೀ ಎಸ್. ಗೋಪಾಲನ್, ಡಾ॥ ಎಚ್.ಎಸ್. ರಾಘವೇಂದ್ರ ರಾವ್, ಪ್ರೊ. ನಾಗಭೂಷಣ ಸ್ವಾಮಿ ಹಾಗೂ ಡಾ॥ ವನಮಾಲಾ ವಿಶ್ವನಾಥ್ ಸಂವಾದದಲ್ಲಿ ಭಾಗವಹಿಸಿದರು.

ಸಂವಾದ ಪ್ರಾರಂಭಿಸಿದ ಶ್ರೀ ಗೋಪಾಲನ್ ಶಿಕ್ಷಣದ ಮುಖ್ಯ ಗುರಿ ಬುದ್ಧಿಶಕ್ತಿಯ ಅರಳುವಿಕೆ ಎಂದು ತಿಳಿಸಿ ಆಧುನಿಕ ಶಿಕ್ಷಣ ಎದುರಿಸುವ ಸವಾಲುಗಳನ್ನು  ವಿವರಿಸಲು ತಜ್ಞರಿಗೆ ಚಾಲನೆ ನೀಡಿದರು. ಡಾ॥ ಎಚ್.ಎಸ್. ರಾಘವೇಂದ್ರರಾವ್ ಬುದ್ಧಿ, ಶಕ್ತಿ ಮಾಹಿತಿ ಅಲ್ಲವೆಂದು ವಿವರಿಸಿ, ಬುದ್ಧಿಶಕ್ತಿ ಸ್ವಾಧ್ಯಾಯ, ಆಧುನಿಕ ಶಿಕ್ಷಣ ವಿಷಯಗಳಾದ ಸಾಹಿತ್ಯ, ತಂತ್ರಜ್ಞಾನ, ವಾಣಿಜ್ಯ, ಇವುಗಳ ಅಧ್ಯಯನ ಜಗತ್ತನ್ನು ನೋಡುವ ದೃಷ್ಟಿಕೋನ ಬದಲಾಯಿಸಿಲ್ಲವೆಂದು ತಿಳಿಸಿದರು.

ಪ್ರೊ॥ ನಾಗಭೂಷಣ ಸ್ವಾಮಿ ಬುದ್ಧಿಶಕ್ತಿಯನ್ನು 'ವಿವೇಕ'ವೆಂದು ತಿಳಿಸಿ ಆಧುನಿಕ ಶಾಲೆಗಳು ವಿವೇಕ ನಾಶಮಾಡುವ ಸಂಸ್ಥೆಗಳೆಂದು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಲ್ಲಿ ಭಯ ಇರಬಾರದು, ಪ್ರೀತಿ ಇರಬೇಕು ಎಂದು ತಿಳಿಸಿದರು. ವಿದ್ಯಾರ್ಥಿ–ಶಿಕ್ಷಕ ಸಂಬಂಧ ಸಹಜವಾಗಿರಬೇಕು ಹಾಗೂ ಮಧುರವಾದ ಸಂಬಂಧ ಬೆಳೆಯಲಿಕ್ಕೆ ಅವಕಾಶವಿರಬೇಕೆಂದು ತಿಳಿಸಿದರು.

ಶ್ರೀಮತಿ ವನಮಾಲಾ ವಿಶ್ವನಾಥ್ ಅವರು ಪೋಷಕರ ಹಾಗೂ ಶಿಕ್ಷಕರ ಪಾತ್ರದ ಮಹತ್ವ ತಿಳಿಸಿದರು. ಶ್ರೀ ಗೋಪಾಲನ್ ಬುದ್ಧಿಶಕ್ತಿಯ ಅರಳುವಿಕೆಯ ಅಡೆತಡೆಗಳ ಗಮನ ಸೆಳೆದರು. ಪ್ರೊ. ನಾಗಭೂಷಣಸ್ವಾಮಿ ಶಾಲೆಗಳೇ ಇದಕ್ಕೆ

*...... 3ನೇ ಪುಟದಲ್ಲಿ ಮುಂದುವರೆದಿದೆ*

Omkar1 E:\Magazines\Valley-Newsletter\feb 05\layout.pmd

# ಸಂಪಾದಕೀಯ: ಜೆ.ಕೆ.ಯವರ ಪ್ರಕೃತಿ ವರ್ಣನೆಗಳು

ನಿಸರ್ಗವು ಜೆ.ಕೆ.ಯವರಿಗೆ ಪರಮಪ್ರಿಯವಾದ ಸಂಗತಿಗಳಲ್ಲಿ ಒಂದು. ಅವರ ಬರವಣಿಗೆಯಲ್ಲಿ ಬದುಕಿನ ಅವಿಭಾಜ್ಯ ಭಾಗವೋ ಎನ್ನುವಂತೆ ಪ್ರಕೃತಿಯನ್ನು ಕುರಿತ ವಿವರಗಳು ಮೂಡಿಬರುತ್ತವೆ. ಜಗತ್ತಿನ ಹಲವು ಭಾಗಗಳನ್ನು ನಿವಾಸಿಯಾಗಿ, ಪ್ರವಾಸಿಯಾಗಿ ನೋಡಿದ ಕೃಷ್ಣಜಿಯವರು ಋತುವೈಭವದ ಅನೇಕ ನೆಲೆಗಳನ್ನು ಅನುಭವಿಸಬಲ್ಲರು. ಇಂಥ ಅನುಭವಗಳನ್ನು ಅವರ ಬಳಸಿಕೊಳ್ಳುವ ಬಗೆಯ ಪರಿಶೀಲನೆಯು ಈ ಸಂಪಾದಕೀಯದ ಉದ್ದೇಶ.

ಪ್ರಕೃತಿಯು ಧರ್ಮನಿರಪೇಕ್ಷವಾದ ಸಂಗತಿ. ಅದರ ವಿವರಗಳು ಸದಾ ಸರ್ವದಾ ಸೆಕ್ಯುಲರ್ ಆದವು. ಆದರೆ ಅನೇಕ ಸಂಸ್ಕೃತಿಗಳು ಪ್ರಕೃತಿಯ ವಿವರಗಳ ಸುತ್ತಲೂ ಸಾಂಸ್ಕೃತಿಕವಾದ ಪರಿವೇಷವನ್ನು ನಿರ್ಮಿಸಿಕೊಂಡಿರುತ್ತವೆ. ನೀರು, ಪರ್ವತ ಎನ್ನುವುದಕ್ಕೂ ಗಂಗೆ, ಹಿಮಾಲಯ ಎನ್ನುವುದಕ್ಕೂ ಅಪಾರ ಅಂತರವಿದೆ. ಪ್ರಕೃತಿಪೂಜೆಯ ನೆಲೆಗಳನ್ನು ಕಾಪಾಡಿಕೊಂಡುಬಂದಿರುವ ಸಮುದಾಯಗಳಲ್ಲಿ ಸಂಸ್ಕೃತಿ ನಿರ್ದಿಷ್ಟ ಗ್ರಹಿಕೆಯು ಕೇವಲ ಸಹಜ.

ಹಾಗೆಂದು ಪ್ರಕೃತಿಯನ್ನು ನಮ್ಮ ಸಂವೇದನೆಗಳ ಅಂತೆಯೇ ಅಭಿವ್ಯಕ್ತಿಯಿಂದ ಹೊರಗೆ ಇಡುವುದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಏಕೆಂದರೆ ಪ್ರಕೃತಿಯ ಬಗ್ಗೆ ನಾವು ತಳೆಯುವ ನಿಲುವುಗಳು ನಮ್ಮ ಜೀವನದರ್ಶನವನ್ನೇ ರೂಪಿಸುವಷ್ಟು ಪ್ರಬಲವಾಗಿರುತ್ತವೆ. ಮನುಷ್ಯನೇ ಜಗತ್ತಿನ ಕೇಂದ್ರ, ವೀರಭೋಗ್ಯಾ ವಸುಂಧರಾ ಎನ್ನುವಂತಹ ನಿಲುವುಗಳಿಗೆ ಪ್ರತಿಯಾಗಿ, ಎಲ್ಲ ಸಚರಾಚರ ವಸ್ತುಗಳೂ ಸೃಷ್ಟಿಯ ಕೇಂದ್ರವೇ ಎಂದು ಭಾವಿಸುವ ಧೋರಣೆಯು ಅತ್ಯಂತ ಆರೋಗ್ಯಕರವಾದುದು. ಪ್ರಕೃತಿಯ ಮಡಿಲಲ್ಲಿ ನಡೆಸುವ ಸರಳ ಜೀವನವನ್ನು ಎಲ್ಲ ಸಂತರೂ ಶ್ಲಾಘಿಸಿದ್ದಾರೆ. ಆದ್ದರಿಂದ ಜೆ.ಕೆ.ಯವರಂಥ ಮಹಾ ದಾರ್ಶನಿಕರಿಗೆ ಪ್ರಕೃತಿಯ ಧಾರ್ಮಿಕ ಆವರಣಕ್ಕೆ ಒತ್ತುಕೊಡದೆಯೂ ಅದರ ಮಹತ್ವವನ್ನು ನಿರೂಪಿಸುವುದು ಬಹಳ ಮುಖ್ಯವೆನಿಸಿತು. ಪ್ರಕೃತಿಯು ಮನುಷ್ಯನಿಗೆ ನೀಡಬಲ್ಲ ಆಸರೆ, ಸಮಾಧಾನ ಮತ್ತು ಅದರ ಬಹುಮುಖತೆಗಳನ್ನು ಅವರು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ಆದ್ದರಿಂದಲೇ ಅವರು ನೀಡುವ ಬಹುಪಾಲು ವಿವರಗಳು ಇಂದ್ರಿಯಾನುಭವಗಳ ನಿರೂಪಣೆಗೆ ಸೀಮಿತವಾಗಿರುತ್ತವೆ. ನಿಸರ್ಗದ ಮಡಿಲಿನಲ್ಲಿಯೇ ಇರುವ ದೇವಸ್ಥಾನ, ಚರ್ಚುಗಳ ಬಗ್ಗೆ ಮಾತನಾಡುವಾಗಲೂ ಅವರು ಮೌಲ್ಯಮಾಪನ ಮಾಡಲು ಹೋಗುವುದಿಲ್ಲ. ತಟಸ್ಥತೆಯು ಅವರ ಅಂತಹ ವರ್ಣನೆಗಳ ಮುಖ್ಯ ಗುಣ.

ಜೆ.ಕೆ.ಯವರ ಅನೇಕ ಕಿರುಬರೆಹಗಳು ತಾತ್ವಿಕವಾದ ನಿರೂಪಣೆಗಿಂತ ಮೊದಲು ಮತ್ತು ಅದರ ನಂತರ ಒಂದಲ್ಲ ಒಂದು ನಿಸರ್ಗದೃಶ್ಯವನ್ನು ವರ್ಣಿಸುತ್ತವೆ. ಆ ವರ್ಣನೆಗೂ ಅಲ್ಲಿರುವ ತಾತ್ವಿಕ ಸಂಗತಿಗೂ ನಡುವೆ ಇರುವ ಸಂಬಂಧ ಮೊದಲ ನೋಟಕ್ಕೆ ಗೊತ್ತಾಗುವುದಿಲ್ಲ. ಅವುಗಳನ್ನು ಒಟ್ಟಿಗೆ ತರಲು ಕಾರಣವೇನು ಎಂದು ಅನೇಕರು ಪ್ರಶ್ನಿಸಬಹುದು. ಆದರೆ ಸತ್ಯಸಂಗತಿಯು ಅಷ್ಟು ಸರಳವಲ್ಲ. ವರ್ಣನೆ ಮತ್ತು ವಿಚಾರಗಳ ನಡುವೆ ಸಹಯೋಗ ಇರುತ್ತದೆ. ಅದನ್ನು ಶೋಧಿಸುವುದು ಅಗತ್ಯ. ವರ್ಣನೆಯು ತಾತ್ವಿಕ ಸಂಗತಿಗೆ ಒಡ್ಡಿದ ರೂಪಕವಾಗಿರುತ್ತದೆ. ಉಪಮಾಲಂಕಾರದಷ್ಟು ಸರಳವಲ್ಲ. ಬದಲಾಗಿ ಒಂದನ್ನು ಇನ್ನೊಂದರ ಪ್ರತಿಮೆ ಎಂದು ಕರೆಯಬಹುದು. ಇದು ಒಂದು ಬಗೆ.

ಇನ್ನೊಂದು ವಿಧಾನವೂ ಇದೆ. ಇಲ್ಲಿ ಒಂದು ವರ್ಣನೆಯು ಲೇಖನದ ತುಂಬಾ ಹರಡಿಕೊಂಡಿರುತ್ತದೆ, ಇಲ್ಲಿ ಲೇಖಕರು ಸ್ಪಷ್ಟವಾಗಿ ಪ್ರತಿಮೆಗೂ ವಿಚಾರಕ್ಕೂ ಇರುವ ಸಂಬಂಧವನ್ನು ಎಳೆಎಳೆಯಾಗಿ ಬಿಡಿಸಿ ತೋರಿಸುತ್ತಾರೆ. ಒದುಗರಿಗೆ ಅದೊಂದು ಸಹಪಯಣ. ನಿಸರ್ಗವನ್ನು ಕೇವಲ ನಿಸರ್ಗವಾಗಿ ಮಾತ್ರವಲ್ಲದೆ ಬೇರೆ ಯಾವುದಕ್ಕೋ ಹಿಡಿದ ಕನ್ನಡಿಯಾಗಿ ಕಾಣುವ ಅನುಭವ.

ಕೃಷ್ಣಜಿಯವರು ಹತ್ತು ಹಲವು ದೇಶಗಳಲ್ಲಿ ಉಪನ್ಯಾಸ ನೀಡಿದವರು. ಆದ್ದರಿಂದಲೇ ಅವರ ವರ್ಣನೆಗಳಲ್ಲಿ ವೈವಿಧ್ಯವಿದೆ. ಇಂಗ್ಲೆಂಡಿನ ಚಳಿಗಾಲದಿಂದ ಹಿಡಿದು, ಶ್ರೀಲಂಕಾದ ಬೇಸಿಗೆಯವರೆಗೆ, ಹಿಮಾಲಯದ ಶಿಖರಗಳಿಂದ ಮೊದಲಾಗಿ, ಗಂಗಾನದಿಯ ಸುವಿಶಾಲ ದಂಡೆಗಳವರೆಗೆ ಆ ವರ್ಣನೆಗಳ ಹರಹಿದೆ. ಒಮ್ಮೆ ಅರಳಿಮರದ ಬಿಳಲುಗಳ ಪರಿಭಾವನೆ ಮಾಡಿದರೆ, ಮತ್ತೊಮ್ಮೆ ಪೈನ್ ವೃಕ್ಷಗಳ ನೀಳಪರ್ಣಗಳ ಸಹಯೋಗ. ಎಲ್ಲದರ ಬಗ್ಗೆಯೂ ಅದೇ ಕಾಳಜಿ. ಅದೇ ಪ್ರೀತಿ.

ಇನ್ನೊಂದು ಸಂಗತಿಯಿದೆ. ನಾವು ನೋಡುವ ಪ್ರತಿಯೊಂದು ಸಂಗತಿಯನ್ನೂ ಅನುಭವಿಸುವ ಪ್ರತಿಯೊಂದು ಐಂದ್ರಿಯಿಕ ವಿವರವನ್ನೂ ಅದಕ್ಕೆ ಇರುವ ಉಪಾಧಿಗಳಿಂದ ಹೊರಗೆ ತೆಗೆದು ಅಲಾಯಿದವಾಗಿ ನೋಡುವುದು ಜೆ.ಕೆ.ಯವರಿಗೆ ಬಹಳ ಮುಖ್ಯ. ಸಂಸ್ಕೃತಿಯೋ ಸಮಕಾಲೀನ ರಾಜಕೀಯಗಳೋ ನೀಡಿದ ಸೀಮಿತ ಚೌಕಟ್ಟುಗಳಿರಬಹುದು. ಅಥವಾ ನಮ್ಮದೇ ಪೂರ್ವಾನುಭವಗಳಿಂದ, ನೆನಪುಗಳಿಂದ ದತ್ತವಾದ ಸಿದ್ಧ ಚಿತ್ರಗಳಿರಬಹುದು. ಪ್ರಕೃತಿಯ ಮಾತೂ ಹಾಗೆಯೇ. "ಅರಳಿ ಮರ", "ಹಸು" ಮುಂತಾದ ಪದಗಳು ಸೂಚಿಸುವ ವಸ್ತುಗಳನ್ನು ಅವು ಹೇಗಿದೆಯೋ ಹಾಗೆ ನೋಡುವುದು ಎಷ್ಟು ಕಷ್ಟ ಯೋಚಿಸಿ ನೋಡಿ. ಹಂದಿ ಮತ್ತು ಹಸು ಎರಡನ್ನು ಒಂದೇ ರೀತಿಯಲ್ಲಿ ಗಮನಿಸುವುದು ಭಾರತ ಭೂಖಂಡದಲ್ಲಿ ಬಹಳ ಕಷ್ಟ. ಆದರೆ ಅಮೆರಿಕಾದಲ್ಲಿ ಅವು ಆಹಾರದ ಎರಡು ಬಗೆಗಳು ಮಾತ್ರವೇನೋ. ನಿಸರ್ಗದ ಮಾತೂ ಹಾಗೆಯೇ. "ಇದು ಎಲೆ ತಾನೇ", "ಇದು ಸಂಪಿಗೆ ಹೂವಲ್ಲವೇ", "ಓ! ಇದು ಬ್ರಾಹ್ಮೀ ಎಂಬ ಮೂಲಿಕೆಯಂತೆ" ಇಂಥ ಮಾತುಗಳನ್ನು ಹೇಳೀಕೊಂಡ ಕೂಡಲೇ ನಮ್ಮ ನೋಡುವಿಕೆಯು ಸ್ಥಗಿತವಾಗುತ್ತದೆ. ಕೇವಲ ಲೇಬಲ್‌ಗಳು ಉಳಿದುಕೊಳ್ಳುತ್ತವೆ. ಇಂತಹ "ಸೀಮಿತ ನೋಟ" ಅಪಾಯಗಳ ಬಗ್ಗೆ ಜೆ.ಕೆ.ಯವರು ಎಚ್ಚರಿಕೆ ನೀಡುತ್ತಾರೆ.

ಹೀಗೆ ಈ ಹಿರಿಯರು, ಪ್ರಕೃತಿಯನ್ನು ನೋಡಿದ, ತಮ್ಮ ಬರವಣಿಗೆಯಲ್ಲಿ ಅವುಗಳ ವಿವರಗಳನ್ನು ಬಳಸಿಕೊಂಡ ರೀತಿಯು ಇನ್ನಷ್ಟು ಆಳವಾದ ಅಧ್ಯಯನವನ್ನು ಬಯಸುತ್ತದೆ.

ಡಾ।। ಎಚ್.ಎಸ್.ರಾಘವೇಂದ್ರ ರಾವ್
(ಸಂಪಾದಕ ಮಂಡಳಿಯ ಪರವಾಗಿ)

*.... 2ನೇ ಪುಟದಿಂದ ಮುಂದುವರೆದಿದೆ*

ಕಾರಣವೆಂದು ಅಭಿಪ್ರಾಯಪಟ್ಟರು. ಪರೀಕ್ಷೆಗಳಿರಬಾರದೆಂದು ತಿಳಿಸಿದರು. ಶ್ರೀಮತಿ ವನಮಾಲಾ ಶಾಲೆಗಳು ಇರಲೇಬೇಕು ಹಾಗೂ ಇದು ಸಮುದಾಯದ ಸಾಮೂಹಿಕ ಜವಾಬ್ದಾರಿ ಎಂದು ತಿಳಿಸಿದರು. ಪ್ರೊ. ರಾವ್ ಅವರು ಪೌರ್ವಾತ್ಯ ಸಮುದಾಯದ ವಿಚಾರಗಳನ್ನು ತಿಳಿಸಿ ಅನುಮಾನ ಪಡುವ ಪ್ರವೃತ್ತಿ ಕಡಿಮೆ ಮಾಡುವ ಅಗತ್ಯದ ಮಹತ್ವವನ್ನು ವಿವರಿಸಿದರು. ಶ್ರೀ ಗೋಪಾಲನ್ ಚರ್ಚೆಯನ್ನು ಸಮಾರೋಪ ಮಾಡಿ ನಿಸರ್ಗ ದೂರತೆ, ಭಯ, ದ್ವಂದ್ವ ಇವುಗಳು ವಿವೇಕದ ಅರಳುವಿಕೆಗೆ ಅಡೆತಡೆಗಳೆಂದು ಅಭಿಪ್ರಾಯಪಟ್ಟರು.

ಸಾಯಂಕಾಲ ನಡೆದ ಸಮಾರೋಪ ಸಮಾರಂಭದಲ್ಲಿ ದಾವಣಗೆರೆ ಅಧ್ಯಯನ ಕೇಂದ್ರದ ಶ್ರೀ ಬಸವಲಿಂಗಪ್ಪನವರು ಹಾಗೂ ಧಾರವಾಡ ಅಧ್ಯಯನ ಕೇಂದ್ರದ ಶ್ರೀಮತಿ ಸಾವಿತ್ರಿ ಮಹಿಷಿ ಸಮಾವೇಶದ ವ್ಯವಸ್ಥೆ ಮೆಚ್ಚಿ, ಸದಸ್ಯರಿಗೆ ಜೆ.ಕೆ. ಅರಿಯಲು ಸಹಕಾರಿಯಾಯಿತು ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು. ಡಾ।। ಸತೀಶ ಇನಾಮದಾರ ಮಾತನಾಡಿ ಜೆ.ಕೆ. ಅಧ್ಯಯನದ ಸೂಕ್ಷ್ಮತೆ ವಿವರಿಸಿದರು.

ಮೂರೂ ದಿನಗಳಂದು ಕೃಷ್ಣಮೂರ್ತಿಯವರ ಇಂಗ್ಲಿಷ್, ಕನ್ನಡ ಪುಸ್ತಕಗಳು, ಧ್ವನಿ ಸುರುಳಿ, ಆಡಿಯೋ, ವಿ.ಡಿ. – ಸಿ.ಡಿ.ಗಳ ಮಾರಾಟ ವ್ಯವಸ್ಥೆ ಮಾಡಲಾಗಿತ್ತು. ಸಮಾವೇಶದ ಸದಸ್ಯರು ಸುಂದರವಾದ, ವಿಶಾಲವಾದ ವ್ಯಾಲಿ ಆವರಣದಲ್ಲಿ ಅಲೆದಾಟಗಳಲ್ಲಿ ಪಾಲ್ಗೊಂಡಿದ್ದರು.

– ಪ್ರೊ।। ಸುರೇಶ ಚೋಳಕೆ

Omkar1 E:\Magazines\Valley-Newsletter\feb 05\layout.pmd

# ಜೆಕೆ: ಕನ್ನಡದಲ್ಲಿ ಐದು ಪುಸ್ತಕಗಳ ಬಿಡುಗಡೆ

ಕೃಷ್ಣಮೂರ್ತಿ ಫೌಂಡೇಶನ್, ಇಂಡಿಯಾದ ಬೆಂಗಳೂರು ಶಿಕ್ಷಣ ಕೇಂದ್ರವು ಏಪ್ರಿಲ್ 4, 2005ರಂದು ಬೆಂಗಳೂರಿನ ಯವನಿಕಾ ಸಭಾಂಗಣದಲ್ಲಿ ಹೊಸ ಕನ್ನಡ ಪುಸ್ತಕಗಳ ಬಿಡುಗಡೆಯ ಸಮಾರಂಭವನ್ನು ನಡೆಸಿತು. ಕರ್ನಾಟಕದ ರಾಜ್ಯಪಾಲರಾದ ಶ್ರೀ ತ್ರಿಲೋಕನಾಥ ಚತುರ್ವೇದಿ, ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಶ್ರೀ ಯು. ಆರ್. ಅನಂತಮೂರ್ತಿ, ಕೃಷ್ಣಮೂರ್ತಿ ಫೌಂಡೇಶನ್ನಿನ ಟ್ರಸ್ಟಿಗಳಲ್ಲಿ ಒಬ್ಬರಾದ ಶ್ರೀ ಕೃಷ್ಣನಾಥ ಮತ್ತು ಕನ್ನಡದ ಹಿರಿಯ ವಿದ್ವಾಂಸರಾದ ಶ್ರೀ ಜಿ. ವೆಂಕಟಸುಬ್ಬಯ್ಯ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ದಿ. ನಿ. ಮುರಾರಿ ಬಲ್ಲಾಳರು ರಚಿಸಿರುವ ***ಜಿಡ್ಡು ಕೃಷ್ಣಮೂರ್ತಿ ಜೀವನ ದರ್ಶನ,*** ಶ್ರೀ ಜಿ. ವೆಂಕಟಸುಬ್ಬಯ್ಯನವರಿಂದ ಅನುವಾದಿತವಾದ ಫ್ರೀಡಂ ಫ್ರಂ ದಿ ನೋನ್ – ***ತಿಳಿದುದೆಲ್ಲವ ಬಿಟ್ಟು,*** ಡಾ. ಮಹಾಬಲೇಶ್ವರರಾವ್ ಅವರಿಂದ ಅನುವಾದಿತವಾದ ಕಾಮೆಂಟರೀಸ್ ಆನ್ ಲಿವಿಂಗ್–2– ***ಬಾಳಿಗೊಂದು ಭಾಷ್ಯ, ಸಂಪುಟ 2,*** ಓ. ಎಲ್. ನಾಗಭೂಷಣಸ್ವಾಮಿಯವರಿಂದ ಅನುವಾದಿತವಾದ ಲೈಫ್ ಅಹೆಡ್ ಪುಸ್ತಕದ ಆಯ್ದ ಭಾಗಗಳು–***ಪ್ರೀತಿ ಎಂದರೇನು*** ಮತ್ತು ಶ್ರೀ ಎಸ್.ಟಿ. ಕಾಶೀಕರ್ ಅವರಿಂದ ಅನುವಾದಿತವಾದ ಆನ್ ಎಜುಕೇಶನ್–***ಶಿಕ್ಷಣ*** ಕೃತಿಯ ಎರಡನೆಯ ಆವೃತ್ತಿ – ಇವು ಅಂದು ಬಿಡುಗಡೆಗೊಂಡ ಪುಸ್ತಕಗಳು.

ಸ್ವಾಗತವನ್ನು ಕೋರಿ ಪ್ರಾಸ್ತಾವಿಕ ನುಡಿಗಳನ್ನು ಆಡಿದ ಡಾ. ಸತೀಶ್ ಇನಾಂದಾರ್ ಅವರು ಜೆಕೆ ಅವರ ಚಿಂತನೆಗಳು ಇಂಗ್ಲಿಷ್ ಭಾಷೆಯನ್ನು ಅರಿಯದ ಜನರಿಗೂ ತಲುಪುವಂತಾಗಬೇಕೆಂಬ ಉದ್ದೇಶದಿಂದ ತಮ್ಮ ಕೇಂದ್ರವು ಅನುವಾದ ಕಾರ್ಯದಲ್ಲಿ ತೊಡಗಿ ಇದುವರೆಗೆ ಜೆಕೆ ಕೃತಿಗಳ ಇಪ್ಪತ್ತು ಕನ್ನಡ ಅನುವಾದಗಳನ್ನು ಪ್ರಕಟಿಸಿರುವ ಬಗ್ಗೆ ತಿಳಿಸಿದರು.


ಪುಸ್ತಕಗಳನ್ನು ಕುರಿತು ಮಾತನಾಡಿದ ಶ್ರೀ ಅನಂತಮೂರ್ತಿಯವರು "ಕೃಷ್ಣಜಿ ಇಲ್ಲೇ ಇದ್ದು ಹೋದವರು. ಬಿಟ್ಟು ಹೋದ ಅವರ ಪ್ರವಚನಗಳಲ್ಲಿ ಈಗಲೂ ಇರುವವರು. ಬದುಕಿದ್ದಾಗ ಪ್ರತಿದಿನವೂ ಮರುಹುಟ್ಟು ಪಡೆದವರಂತೆ ಸ್ಪಂದಿಸಿದವರು. "ನಿನ್ನೆ"ಗೆ ಸತ್ತವರು. ಇರುವ ತನಕ ಸತ್ತು, ಹುಟ್ಟಿ, ಮಿಡಿದು ಕಾಲದಲ್ಲಿ ಲೀನವಾದವರು" ಎಂದು ಹೇಳಿ ಜೆಕೆ ಚಿಂತನೆಗಳು ನಮ್ಮನ್ನು ತಬ್ಬಿಬ್ಬು ಮಾಡುವ ಬಗೆಯನ್ನು ವಿವರಿಸಿದರು. ಕ್ರಿಯಾಶೀಲ ರಾಜಕಾರಣದಲ್ಲಿ, ನಾಳೆಗಳನ್ನು ನಿರ್ಮಿಸುವ ಹಂಬಲದಲ್ಲಿ ನಿನ್ನೆಗಳು, ಚರಿತ್ರೆಗಳು ಅಗತ್ಯವಲ್ಲವೆ ಎಂದು ನುಡಿದರು. ಕೃಷ್ಣಮೂರ್ತಿ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಇನ್ನಷ್ಟು ಮಹತ್ವವನ್ನು ನೀಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ದಿ. ಮುರಾರಿ ಬಲ್ಲಾಳರ ವ್ಯಕ್ತಿತ್ವ, ತತ್ಪರತೆಗಳನ್ನು ಕುರಿತು ಹೇಳಿದರು. ಮುರಾರಿ ಬಲ್ಲಾಳರ ತಂದೆಯವರು ಬಿಡುಗಡೆಯಾದ ಪುಸ್ತಕದ ಪ್ರತಿಯನ್ನು ಪಡೆದುಕೊಂಡರು. ಉಪಸ್ಥಿತರಿದ್ದ ಎಲ್ಲ ಅನುವಾದಕರಿಗೂ ಮತ್ತು ಮುದ್ರಕರಿಗೂ ಗೌರವಪ್ರತಿಗಳನ್ನು ನೀಡಲಾಯಿತು.

ಮಾನ್ಯ ರಾಜ್ಯಪಾಲರಾದ ಶ್ರೀ ಚತುರ್ವೇದಿಯವರು ಜೆಕೆಯವರ ಚಿಂತನೆಗಳು ತಮ್ಮ ಮೇಲೆ ಬೀರಿದ ಪ್ರಭಾವ, ತಮ್ಮ ಮತ್ತು ಅವರ ಒಡನಾಟದಿಂದ ತಾವು ತಿಳಿದ ಸಂಗತಿಗಳು, ಜೆಕೆಯವರ ಪ್ರಾಮುಖ್ಯ ಮೊದಲಾದ ಸಂಗತಿಗಳನ್ನು ಕುರಿತು ಸುದೀರ್ಘವಾಗಿ ಮಾತನಾಡಿದರು.

ವ್ಯಾಲಿ ಶಾಲೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ಸಭೆಯ ಆರಂಭ ಮತ್ತು ಅಂತ್ಯದಲ್ಲಿ ಮಂತ್ರಪಠಣ ಮತ್ತು ಶಾಂತಿ ಸೂಕ್ತಗಳ ಪಠಣ ನಡೆಯಿತು. ಶಾಲೆಯ ಅಧ್ಯಾಪಕರಾದ ಶ್ರೀಮತಿ ಉಷಾ ಅವರು ಕಾರ್ಯಕ್ರಮದ ನಿರ್ವಹಣೆಯನ್ನು ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಶಿಕ್ಷಣ ಕೇಂದ್ರವು ಜೆಕೆಯವರ ಬದುಕಿನ ಸಮಗ್ರ ಚಿತ್ರಣವನ್ನು ನೀಡುವಂಥ ಚಿತ್ರಗಳ ಪ್ರದರ್ಶನವೊಂದನ್ನು ಆಯೋಜಿಸಿತ್ತು. ಕೃಷ್ಣಮೂರ್ತಿಯವರ ಚಿಂತನೆಗಳಲ್ಲಿ ಆಸಕ್ತರಾದವರು, ಕನ್ನಡ ಸಾಹಿತ್ಯ ಲೋಕದ ಪ್ರಮುಖರು, ದೂರದ ಊರುಗಳಿಂದ ಬಂದಿದ್ದ ಜೆಕೆ ಚಿಂತನೆಗಳಲ್ಲಿ ಆಸಕ್ತರಾದವರು ಸಭೆಯಲ್ಲಿ ಉಪಸ್ಥಿತರಿದ್ದರು.

### ಜಿಡ್ಡು ಕೃಷ್ಣಮೂರ್ತಿ – ಜೀವನ ದರ್ಶನ (K-Biography)




ಲೇಖಕರು: ಡಾ॥ ನಿ. ಮುರಾರಿ ಬಲ್ಲಾಳ

ಬೆಲೆ ರೂ. 130/–

ಕೃಷ್ಣಮೂರ್ತಿಯವರ ಅಪರೂಪದ ಭಾವಚಿತ್ರಗಳನ್ನೊಳಗೊಂಡ ಕನ್ನಡದಲ್ಲಿ ಪ್ರಕಟವಾದ ಮೊದಲ ಜೀವನ ಚರಿತ್ರೆ. ಇದರಲ್ಲಿ ಕೃಷ್ಣಜಿ ಅವರ ಬದುಕು ಹಾಗೂ ಬರಹಗಳ ಸುಂದರವಾದ ವಿವರಣೆ ಇದೆ. ಕೃಷ್ಣಮೂರ್ತಿ ಅವರ ವಿಚಾರಗಳನ್ನು ಅತ್ಯಂತ ನಿಷ್ಠೆಯಿಂದ ಅಧ್ಯಯನ ಮಾಡಿದ ಕನ್ನಡದ ಪ್ರಸಿದ್ಧ ಲೇಖಕ ಡಾ॥ ನಿ. ಮುರಾರಿ ಬಲ್ಲಾಳರ ಕೊನೆಯ ಪುಸ್ತಕ.

### ಜೆ. ಕೃಷ್ಣಮೂರ್ತಿ – ಶಿಕ್ಷಣ (K- on Education)





ಅನುವಾದಕರು : ಶ್ರೀ ಎಸ್.ಟಿ. ಕಾಶೀಕರ

ಬೆಲೆ ರೂ. 90/–

ನಮ್ಮ ಎಲ್ಲ ಪ್ರಕಟಣೆಗಳಲ್ಲಿ ದ್ವಿತೀಯ ಮುದ್ರಣ ಕಂಡ ಪುಸ್ತಕಗಳಲ್ಲಿ ಇದು ಪ್ರಮುಖವಾದುದು. ಓದುಗರ ಬೇಡಿಕೆಯ ಒತ್ತಾಸೆಯನ್ನು ಗಮನಿಸಿ ಅಲ್ಲಲ್ಲಿ ಕೊಂಚ ತಿದ್ದುಪಡಿ, ನಾವೀನ್ಯವಾಗಿ, ಪ್ರಕಟಗೊಂಡ ಈ ಪುಸ್ತಕವನ್ನು ಕನ್ನಡಿಗರು ಮೆಚ್ಚುವರೆಂಬ ಭರವಸೆ ನಮಗಿದೆ.

### ಪ್ರೀತಿ ಎಂದರೇನು? (What is Love?)





ಅನುವಾದಕರು : ಪ್ರೊ. ಓ.ಎಲ್. ನಾಗಭೂಷಣಸ್ವಾಮಿ

ಬೆಲೆ ರೂ. 25/–

ಅನುವಾದ ಕಾರ್ಯದಲ್ಲಿ ಸಿದ್ಧ ಹಸ್ತರಾದ ಪ್ರೊ. ನಾಗಭೂಷಣಸ್ವಾಮಿಯರಿಂದ ರಚಿತವಾದ ಈ ಚಿಕ್ಕ ಪುಸ್ತಕ ಕೃಷ್ಣಮೂರ್ತಿ ಅವರ Life Ahead ಎನ್ನುವ ಪುಸ್ತಕದಲ್ಲಿಯ 8 ರಿಂದ 10 ಪ್ರಕರಣಗಳ ಅನುವಾದವಾಗಿದೆ. ಈಗಾಗಲೇ ಮೊದಲ ಪ್ರಕರಣಗಳ ಅನುವಾದ ಎರಡು ಚಿಕ್ಕ ಪುಸ್ತಕಗಳನ್ನು ಪ್ರೊ. ಸ್ವಾಮಿ ಅವರಿಂದ ಈಗಾಗಲೇ ಅನುವಾದಗೊಂಡು ಓದುಗರ ಕೈ ಸೇರಿವೆ. ಈ ಪುಸ್ತಿಕೆಯು ಕೂಡ ಓದುಗರ ಮೆಚ್ಚುಗೆಯನ್ನು ಪಡೆಯುವುದರಲ್ಲಿ ಹಿಂದೆ ಬೀಳದೆಂಬ ನಂಬಿಕೆ ನಮ್ಮದಾಗಿದೆ.

### ಬಾಳಿಗೊಂದು ಭಾಷ್ಯ – ಸಂಪುಟ ಎರಡು (Commentaries on Living Vol.II)





ಅನುವಾದಕರು : ಡಾ॥ ಮಹಾಬಲೇಶ್ವರ ರಾವ್

ಬೆಲೆ ರೂ. 150/–

''ಬಾಳಿಗೊಂದು ಭಾಷ್ಯ''ದ ಮೊದಲ ಸಂಪುಟದ ಸವಿಯನ್ನುಂಡ ಓದುಗರಿಗೆ ಈ ಎರಡನೆಯ ಸಂಪುಟವೂ ಕೂಡ ರುಚಿಸುವುದೆಂದು ನಂಬಿದ್ದೇವೆ. ಡಾ॥ ಮಹಾಬಲೇಶ್ವರ ರಾವ್ ಅವರು ಬಹು ಪರಿಶ್ರಮವಹಿಸಿ ಈ ಅನುವಾದವನ್ನು ಸಿದ್ಧಪಡಿಸಿದ್ದಾರೆ.

### ತಿಳಿದುದೆಲ್ಲವ ಬಿಟ್ಟು (Freedom from the known)




ಅನುವಾದಕರು : ಪ್ರೊ. ಜಿ. ವೆಂಕಟಸುಬ್ಬಯ್ಯ

ಬೆಲೆ ರೂ. 90/–

ಕನ್ನಡ ಹಿರಿಯ ಸಾಹಿತಿ ಹಾಗೂ ಶಿಕ್ಷಣ ತಜ್ಞರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರಿಂದ ಅನುವಾದಿತವಾದ ಈ ಪುಸ್ತಕ ಕೃಷ್ಣಮೂರ್ತಿಯವರ ಅತೀ ಜನಪ್ರಿಯ ಪುಸ್ತಕ ''Freedom from the known''ಆಂಗ್ಲ ಪುಸ್ತಕದ ಅನುವಾದ ಸಿದ್ಧಹಸ್ತರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಲೆಕ್ಕಣಿಕೆಯಿಂದ ಮೂಡಿ ಬಂದ ಈ ಪುಸ್ತಕ ಅಷ್ಟೇ ಜನಪ್ರಿಯವಾಗಬಲ್ಲಂಥದ್ದು.

Omkar1 E:\Magazines\Valley-Newsletter\feb 05\layout.pmd

*(1ನೇ ಪುಟದಿಂದ ಮುಂದುವರೆದಿದೆ)*

ವಿಹಾರ್' ಎಂಬ ವಿಶಾಲವಾದ ಬಂಗಲೆಯಲ್ಲಿ ಇರಲು ವ್ಯವಸ್ಥೆ ಮಾಡಿದರು. ಜಿಡ್ಡೂಗೂ ಅವರ ಬಗ್ಗೆ ಮಾತೃಸಮಾನ ಗೌರವವಿತ್ತು. ಆದರೆ ಅಡಿಯಾರಿಗೆ ಕಾಲಿಡಲಿಲ್ಲ.

ನಾನು ಮದ್ರಾಸಿಗೆ ಹೋದಾಗ ವಸಂತ ವಿಹಾರ ಆಶ್ರಮದಲ್ಲಿ ಒಮ್ಮೊಮ್ಮೆ ಇರುತ್ತಿದ್ದೆ. ಅಲ್ಲಿ ನನಗೆ ಆಪ್ತರಾಗಿದ್ದವರಿದ್ದರು. ಸಂಪರ್ಕ ಉಳಿಸಿಕೊಂಡಿದ್ದೆ. ಆಶ್ರಮದಲ್ಲಿ ಜಿಡ್ಡು ಉಪನ್ಯಾಸಗಳಾಗುತ್ತಿದ್ದವು. ನಾನು ಹಾಜರಿರುತ್ತಿದ್ದೆ. ಅವರು ಒಂದು ಬಗೆಯಲ್ಲಿ ವರ್ಲ್ಡ್ ಟೀಚರ್ ಆದರು. ಅವರ ಚಿಂತನೆ, ಅವರ ವಿಚಾರದೃಷ್ಟಿ ಅನಿಬೆಸೆಂಟರದಕ್ಕಿಂತ ಭಿನ್ನವಾಗಿದ್ದವು. ಅವರ ವಿಚಾರಧಾರೆಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ನನಗೂ ಆಗಲಿಲ್ಲ . ಈಗಿನ ಕಾಲದ ದೃಷ್ಟಿಯಿಂದ ಹೇಳಬಹುದಾದರೆ ಅವರದು ಅಸ್ತಿತ್ವವಾದದ ರೀತಿಯ ವಿಚಾರಧಾರೆ. ಹಿಂದಿನದನ್ನೆಲ್ಲ ಮರೆಯಬೇಕು. ಹೊಸ ಹೊಸ ರೀತಿಯಲ್ಲಿ ಕ್ರಿಯಾಶೀಲರಾಗಬೇಕು, ಸೃಜನಶೀಲರಾಗಬೇಕು ಎಂಬುದು. ಬಹುಮುಖ್ಯ ವಿಚಾರವೆಂದರೆ, ನಿನ್ನನ್ನು ನೀನೇ ನೋಡಿಕೊಳ್ಳಬೇಕು ಎನ್ನುತ್ತಿದ್ದುದು. ಗುರು ಎಂಬುವರು ಯಾರೂ ಇಲ್ಲ, ಗುರು-ಶಿಷ್ಯ ಸಂಬಂಧವನ್ನೇ ಅವರು ನಿರಾಕರಿಸುತ್ತಿದ್ದರು.

ಅಚ್ಯುತ ಪಟವರ್ಧನರನ್ನು ಶಿಷ್ಯರೆನ್ನುವಂತಿಲ್ಲ, ಜಿಡ್ಡು ಅವರ ಜೊತೆಗಾರರು ಸ್ನೇಹಿತರು ಎನ್ನಬಹುದು ನನಗೆ ಆಪ್ತರಾಗಿದ್ದರು. ಅವರ ಸೋದರರೆ ಪದ್ಮಾಕರ ಪಟವರ್ಧನ್, ಓರಿಯಂಟ್ ಲಾಂಗ್‌ಮನ್ನಿನ ತ್ರಿಮೂರ್ತಿಗಳಲ್ಲಿ ಒಬ್ಬರು. ಅವರ ಪತ್ನಿ ಸುನಂದ  ಪಟವರ್ಧನ್ ನನ್ನ ದೊಡ್ಡ ಅಳಿಯನ ಸಹೋದರಿ. ಅವರಿಬ್ಬರೂ ಜಿಡ್ಡು ಅವರ ಶಿಷ್ಯರಾಗಿದ್ದರು. ಆಶ್ಚರ್ಯದ ವಿಷಯ ಗುರುಶಿಷ್ಯ ನಂಬಿಕೆ ಜಿಡ್ಡುವಿಗೆ ಇಲ್ಲದಿದ್ದರೂ ಅವರ ಸಮೀಪದವರು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. 1930ರಲ್ಲಿ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಅಚ್ಯುತರ ಇನ್ನೊಬ್ಬ ಅಣ್ಣ ರಾವ್ ಸಾಹೇಬ್ ಪಟವರ್ಧನ್, ಗಾಂಧೀಜಿಗೆ ಆಪ್ತರಾಗಿದ್ದವರು. ಅವರ ಮತ್ತು ಅಚ್ಯುತರ ಪೂನಾದಲ್ಲಿನ ಮನೆ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ಅವರು ಒಟ್ಟು ಐದು ಜನ ಸೋದರರು.

ಜಿಡ್ಡು ಕೃಷ್ಣಮೂರ್ತಿ ಕ್ಯಾಲಿಫೋರ್ನಿಯಾದಲ್ಲಿದ್ದರು. ಇಂಗ್ಲೆಂಡ್ ಯುರೋಪುಗಳಿಗೂ ಹೋಗಿ ಎರಡು ಮೂರು ತಿಂಗಳಿರುತ್ತಿದ್ದರು. ಇಂಡಿಯಾಕ್ಕೆ ಬಂದಾಗಲೂ ಕೆಲ ತಿಂಗಳಿದ್ದು , ಮದ್ರಾಸಿನಲ್ಲಿ ಉಪನ್ಯಾಸ ನೀಡುತ್ತಿದ್ದರು. ಮುಂಬಯಿ, ದೆಹಲಿಗಳಿಗೂ ಹೋಗುತ್ತಿದ್ದರು. ಬಹು ಹಿಂದೆ ಬೆಂಗಳೂರಿಗೂ ಬಂದಿದ್ದರು. ಆಗಿನ್ನೂ ಅವರ ಖ್ಯಾತಿ ಅಷ್ಟು ಹಬ್ಬಿರಲಿಲ್ಲ. ದೊಡ್ಡಬಳ್ಳಾಪುರದ ಬಳಿ ಶಾಂಪುರ ಮನೆತನವಿದೆ. ಅವರ ಸೋದರರಲ್ಲಿ ಒಬ್ಬರು ಲಕ್ಷ್ಮೀನರಸಯ್ಯ ಎಂದು. ಅವರ ಮನೆ ವಿ.ವಿ.ಪುರಂನ ಡಯಾಗನಲ್ ರಸ್ತೆಯಲ್ಲಿತ್ತು. ಇವರೆಲ್ಲ ಥಿಯಾಸಫಿಸ್ಟರು. ಜಿಡ್ಡು ಇವರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದರು. ಅವರ ಉಪನ್ಯಾಸ ಕೇಳಲು ಪ್ರಾರಂಭದಲ್ಲಿ ಅಲ್ಪ ಸಂಖ್ಯೆಯ ಗುಂಪಿನಲ್ಲಿ ಜನ ಸೇರುತ್ತಿದ್ದರು. ಅವರ ಉಪನ್ಯಾಸಗಳನ್ನು ಷಾರ್ಟ್‌ಹ್ಯಾಂಡಿನಲ್ಲಿ ಬರೆದುಕೊಂಡು ಅನಂತರ ಚಿಕ್ಕಚಿಕ್ಕ ಹೊತ್ತಿಗೆಗಳಾಗಿ ಮುದ್ರಿಸಿ ಶಾಂಪುರ ಸೋದರರು, ರಾಮಚಂದ್ರರಾವ್ ಮುಂತಾದವರು ಎಲ್ಲರಿಗೂ ಹಂಚುತ್ತಿದ್ದರು. ಆ ಉಪನ್ಯಾಸಗಳಿಗೆ ನಾನೂ ಹೋಗುತ್ತಿದ್ದೆ. ನಾನು ದೆಹಲಿಯಲ್ಲಿದ್ದಾಗ ಜಿಡ್ಡು ಅವರ ಬಹುಪಾಲು ಉಪನ್ಯಾಸಗಳನ್ನು ಕೇಳಿದ್ದೇನೆ. ಮುಂಬಯಿಯಲ್ಲೂ ಅವರನ್ನು ಭೇಟಿಯಾಗಿದ್ದೆ. ಋಷಿವ್ಯಾಲಿಗೆ ಅವರು ಹೋಗಿದ್ದಾಗ ನಾನೂ ಅಲ್ಲಿಗೆ ಹೋಗಿದ್ದೆ.

(ನಿಟ್ಟೂರು ಶ್ರೀನಿವಾಸರಾಯರ ''**ನೂರರ ನೆನಪು**'' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ)

# ಮನವಿ

ನಮ್ಮ ವಾರ್ತಾಪತ್ರವನ್ನು ಮೇ 1999ರಿಂದ ಇಲ್ಲಿಯವರೆಗೆ ಉಚಿತವಾಗಿ ಕಳುಹಿಸಲಾಗುತ್ತಿದ್ದ ವಿಷಯ ತಮಗೆಲ್ಲ ವಿದಿತವೇ ಇದೆ. ಆದರೆ ಇತ್ತಲಾಗಿ ಅದನ್ನು ಪ್ರಕಟಗೊಳಿಸುವಲ್ಲಿ ಹಾಗೂ ಅಂಚೆವೆಚ್ಚ ಇತ್ಯಾದಿಗಳು ತುಂಬಾ ಹೆಚ್ಚಾಗಿರುವ ಕಾರಣ ಇನ್ನು ಮುಂದೆ ಉಚಿತವಾಗಿ ಕಳುಹಿಸಲು ಸಾಧ್ಯವಾಗದ ಹಾಗಾಗಿದೆ. ನಮ್ಮ ಆತ್ಮೀಯ ಓದುಗರು, ಆಗಾಗ ಕೊಂಚ ಸಹಾಯಧನವೆಂದು ಅಲ್ಪ ಹಣವನ್ನು ಕಳುಹಿಸುತ್ತಿದ್ದರಾದರೂ ಅದು ಸಾಕಾಗದ ಕಾರಣ ಬರುವ ಮೇ ತಿಂಗಳ 2005ರ ಸಂಚಿಕೆಯಿಂದ, ನಮ್ಮ ಪತ್ರಿಕೆಯನ್ನು ಕೇವಲ ಚಂದಾದಾರರಿಗೆ ಮಾತ್ರ ಕಳಿಸುವುದೆಂದು ನಿರ್ಣಯ ಮಾಡಲಾಗಿದೆ. ಚಂದಾ ಹಣದ ವಿವರ ಈ ಪ್ರಕಾರ ಇದೆ.

ವಾರ್ಷಿಕ ಚಂದಾ ದರ : ರೂ. 20/-
ಪಂಚವಾರ್ಷಿಕ ಚಂದಾ ದರ : ರೂ. 100/-

ಆದ್ದರಿಂದ ಓದುಗರು, ತಮ್ಮ ಚಂದಾಹಣವನ್ನು ಮುಂಗಡವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ - "Bangalore Education Centre, KFI" ಇವರ ಹೆಸರಿನಲ್ಲಿ ತಮ್ಮ ಹೆಸರು, ಪೂರ್ಣ ವಿಳಾಸಗಳನ್ನು ಇದಕ್ಕೆ ಲಗತ್ತಿಸಿರುವ ಫಾರಂನೊಂದಿಗೆ ಕಳುಹಿಸಿ, ಪತ್ರಿಕೆಯು ನಿರಂತರ ತಮಗೆ ತಲುಪುವಂತೆ ಸಹಕರಿಸಬೇಕೆಂದು ಪ್ರಾರ್ಥಿಸುತ್ತೇವೆ. ನವೆಂಬರ್ 2004 ಹಾಗೂ ಫೆಬ್ರವರಿ 2005 ಈ ಎರಡು ಸಂಚಿಕೆಗಳನ್ನು ಎಂದಿನಂತೆ ಉಚಿತವಾಗಿ ಕಳುಹಿಸಲಾಗುವುದು.

## ಚಂದಾದಾರರ ನೋಂದಣಿ ಫಾರ್ಮ್

ಹೆಸರು : ____________________

ಪೂರ್ಣ ವಿಳಾಸ : ____________________

____________________

ಚಂದಾ ವಿವರ
ವಾರ್ಷಿಕ ರೂ. 20/-
ಪಂಚವಾರ್ಷಿಕ ರೂ. 100/-

ಡಿಮ್ಯಾಂಡ್ ಡ್ರಾಫ್ಟ್ "Bangalore Education Centre, KFI" ಇವರ ಹೆಸರಿನಲ್ಲಿ / ರೂ. ...........................
ಬ್ಯಾಂಕ್ ............................................................ ನಂ. ........................ ದಿನಾಂಕ : ........................
ಕಳುಹಿಸಲಾಗಿದೆ

ದಿನಾಂಕ :

ಚಂದಾದಾರರ ಸಹಿ

Omkar1 E:\Magazines\Valley-Newsletter\feb 05\layout.pmd

## ಜೆ.ಕೆ. ಪುಸ್ತಕ ಮಾಲೆ ಪ್ರಕಟಣೆ

ಬೆಂಗಳೂರಿನ ಕೃಷ್ಣಮೂರ್ತಿ ಶಿಕ್ಷಣ ಕೇಂದ್ರವು ಜೆ.ಕೆ.ಯವರ ಪುಸ್ತಕಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಹೊಸ ವಿನ್ಯಾಸದೊಂದಿಗೆ ಸುಂದರವಾಗಿ ಪ್ರಕಟಿಸಲು ಆರಂಭಿಸಿದೆ. ಈಗಾಗಲೇ ಬಿಡುಗಡೆಯಾದ ಪುಸ್ತಕಗಳ ಮಾಹಿತಿ ಕೆಳಕಂಡಂತಿದೆ.

೧. **ಧ್ಯಾನ ಚಿಂತನ**
ಅನು. ಡಾ. ನಿ. ಮುರಾರಿ ಬಲ್ಲಾಳ — ರೂ. ೬೫/-

೨. **ಹಿಂಸೆಯನ್ನು ಮೀರಿ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೧೨೦/-

೩. **ಕ್ರಿಯೆ ಮತ್ತು ಸಂಬಂಧ**
ಅನು. ಬಿ.ಎ. ಸನದಿ — ರೂ. ೧೫/-

೪. **ಮೊದಲ ಹಾಗೂ ಕೊನೆಯ ಬಿಡುಗಡೆ**
ಅನು. ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿ — ರೂ. ೧೫೦/-

೫. **ಕಾಲ ಮತ್ತು ಕಾಲರಹಿತ**
ಅನು. ಶ್ರೀಮತಿ ವನಮಾಲಾ ರಂಗನಾಥ ರಾವ್ — ರೂ. ೧೦/-

೬. **ಸಂಸ್ಕೃತಿ ಸಂಗತಿ**
ಅನು. ಪ್ರೊ. ಎಚ್.ಎಸ್. ರಾಘವೇಂದ್ರ ರಾವ್ — ರೂ. ೧೫೦/-

೭. **ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೧೫/-

೮. **ಅನುದಿನ ಚಿಂತನ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೧೬೦/-

೯. **ಬಾಳಿಗೊಂದು ಭಾಷ್ಯ - ಸಂಪುಟ ೧**
ಅನು. ಡಾ. ಮಹಾಬಲೇಶ್ವರರಾವ್ — ರೂ. ೧೩೦/-

೧೦. **ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ**
ಅನು. ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೦/-

೧೧. **ಶಿಕ್ಷಣ ಮತ್ತು ಜೀವನ**
ಅನು. ಡಾ. ಎಚ್.ಎಸ್. ರಾಘವೇಂದ್ರ ರಾವ್ — ರೂ. ೬೫/-

೧೨. **ಭಯದಾಚೆಯ ಬದುಕು**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೦/-

೧೩. **ದುಃಖಕ್ಕೆ ವಿದಾಯ**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

೧೪. **ಸಂಘರ್ಷವಿರದ ಬದುಕಿಗಾಗಿ**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

೧೫. **ಸಂಬಂಧವೆಂದರೇನು?**
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

೧೬. **ಜೆ.ಕೆ. ಜೀವನ ದರ್ಶನ**
ಲೇಖಕರು : ನಿ. ಮುರಾರಿ ಬಲ್ಲಾಳ — ರೂ. ೧೩೦/-

೧೭. **ಜೆ. ಕೃಷ್ಣಮೂರ್ತಿ - ಶಿಕ್ಷಣ**
(ದ್ವಿತೀಯ ಆವೃತ್ತಿ) ಎಸ್.ಡಿ. ಕಾಶೀಕರ — ರೂ. ೯೦/-

೧೮. **ತಿಳಿದುದೆಲ್ಲವ ಬಿಟ್ಟು...**
ಪ್ರೊ. ಜಿ. ವೆಂಕಟಸುಬ್ಬಯ್ಯ — ರೂ. ೯೦/-

೧೯. **ಬಾಳಿಗೊಂದು ಭಾಷ್ಯ - ಸಂಪುಟ ೨**
ಡಾ. ಮಹಾಬಲೇಶ್ವರ ರಾವ್ — ರೂ. ೧೫೦/-

೨೦. **ಪ್ರೀತಿ ಎಂದರೇನು?**
ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ — ರೂ. ೨೫/-

## Sahyadri Gathering in Nov. 2005 (KFI)

ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾ, ವಾರ್ಷಿಕ ಸಮಾವೇಶವು ಇದೇ ನವೆಂಬರ್ ರಿ. 17ರಿಂದ 21ರ ವರೆಗೆ ಪುಣೆಯ ಬಳಿಯ ಸಹ್ಯಾದ್ರಿ ಅಧ್ಯಯನ ಕೇಂದ್ರದಲ್ಲಿ ನಡೆಯಲಿದೆ ಹೆಚ್ಚಿನ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕಾಗಿ ವಿನಂತಿ.

ವಿಳಾಸ : **Krishnamurti Study Centre - Sahyadri**, The Sahyadri School, P.O. Tiwari

*ಖಾಸಗಿ ಪ್ರಸಾರಕ್ಕಾಗಿ ಮಾತ್ರ*
*(For private circulation only)*

Printed, Published and Owned by:
Dr. Satish R Inamdar
Director
**The Study, Bangalore Education Centre**
Krishnamurti Foundation India
Thatguni Post, Bangalore - 560 062.
Tel.: 080 - 28435243
Editor : Dr. Satish R Inamdar
E-mail : kfistudy@vsnl.com

Printed at : Omkar Offset Printers, # 3/3, 1st Main Road
N.T. Pet, Bangalore - 2. Telefax : 26708186, 26709026
e-mail : omkar@blr.vsnl.net.in Website : www.omkarprinters.com

Book packet containing periodicals.

Price : Single copy Rs. 5/-
Annual Subscription : Rs. 20/-